# ಕಣ್ಮರೆಯ ಕಾಡಿನತ್ತ ಕರಿ ಮರ

ನಮ್ಮ 'ಮರದಾಹ'ದ ತೀವ್ರತೆಗೆ ಬೀಟೆ ಅಳಿವಿನಂಚಿಗೆ ಬಂದಿದೆ. ಅದನ್ನು ಸಂರಕ್ಷಿಸದೆ ಹೋದರೆ, ನಮ್ಮ ಮಕ್ಕಳಿಗೆ ಬೀಟೆಯನ್ನು ಗೂಗಲ್‌ನಲ್ಲಿ ತೋರಿಸಬೇಕಾದೀತು.

■ ವಿನು ಗಂಗೆ



ಕೆಲವು ದಿನಗಳ ಹಿಂದೆ ಬೆಂಗಳೂರಿನ ಕಚೇರಿಯೊಂದಕ್ಕೆ ಕಾರ್ಯನಿಮಿತ್ತ ಹೋಗಿದ್ದಾಗ ನನ್ನ ಸಹೋದ್ಯೋಗಿ ಒಬ್ಬರಿಗೆ ಕಾಯಬೇಕಾದ ಸಂದರ್ಭ ಇತ್ತು. ಕಾಯುವಿಕೆಯ ಬೇಸರ ಕಳೆಯಲು ಆ ಕಚೇರಿಯ ಆವರಣಲ್ಲಿ ಬೆಳೆಸಿದ್ದ ಮರಗಳನ್ನು ನೋಡುತ್ತಾ ಇದ್ದೆ. ಒಂದು ಮರ ಯಾವುದೆಂದು ತಿಳಿಯಲಿಲ್ಲ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಒಂದೈವತ್ತು ಜಾತಿಯ ಸರ್ವೇಸಾಮಾನ್ಯ ಮರಗಳನ್ನು ಬೆಳೆಸಿರುವುದು ಬಿಟ್ಟರೆ, ಬೇರೆ ಮರ ವಿರಳ. ನನಗೆ ಪರಿಚಿತವಲ್ಲದ ಆ ಮರದ ಫೋಟೊ ತೆಗೆದೆ. ಅದನ್ನು ವೃಕ್ಷ ತಜ್ಞರಿಗೆ ತೋರಿಸಿದಾಗ ತಿಳಿದದ್ದು – ಅದು ಬೀಟೆ ಮರ!



ನಮ್ಮ ಊರ ತೋಟದಲ್ಲಿ ಕೂಡಾ ಬೀಟೆ ಮರ **(Black Rose Wood, Dalbergia Latifolia)** ಬೆಳೆಸಿದ್ದೇವೆ. ಆದರೆ, ಅದು ಇದಕ್ಕಿಂತ ವಿಭಿನ್ನವಾಗಿತ್ತು. ಚಿತ್ರದಲ್ಲಿ ಎಲೆ ತುದಿ ಮೊಂಡಾಗಿರುವುದು ನಮ್ಮ ಬೀಟೆ; ಅದು ಮಲೆನಾಡಿನ ಕಾಡುಗಳಲ್ಲಿ ಬೆಳೆಯುವುದು. ಬಹಳ ಗಟ್ಟಿ. ಕೇವಲ ಮಲೆನಾಡಿನ ಬೀಟೆ ಬಗ್ಗೆ ಮಾತ್ರ ತಿಳಿದಿದ್ದರಿಂದ ನನಗೆ ಇನ್ನೊಂದು ಜಾತಿಯ ಬೀಟೆಯನ್ನು ಗುರುತಿಸಲಾಗಿರಲಿಲ್ಲ. ಚಿತ್ರದಲ್ಲಿ ಎಲೆ ಚೂಪಾಗಿ ಇರುವುದು **Indian Rose Wood (Dalbergia Sissoo)**. ಇದು ಅಷ್ಟು ಗಟ್ಟಿಯಲ್ಲ. ಉತ್ತರ ಭಾರತದಲ್ಲಿ ಬೆಳೆಯುತ್ತದೆ.

ನಮ್ಮ ಬೀಟೆ 'ಕರಿ ಮರ' ಎಂದೇ ಪ್ರಸಿದ್ಧಿ. ನಾಟಾಕ್ಕಾಗಿ ಕಡಿದು ಈ ಮರ ಅಳಿವಿನ ಅಂಚಿಗೆ ಬಂದುನಿಂತಿದೆ. ಕಟಾವಿಗೆ ಬರಲು ಕೊನೇ ಪಕ್ಷ ನಲವತ್ತು ವರ್ಷ ಬೇಕು. ಹಾಗಾಗಿ ಬೆಳೆಯುವವರೂ ಇಲ್ಲ. ನಮ್ಮ ಬೀಟೆಗೆ ತೆಳುವಾದ ಕಾಸಿನ ಸರದಂಥ ಎಲೆಗಳು. ಈ ಬಗೆಯ ದೊಡ್ಡದೊಂದು ಬೀಟೆ ಮರವನ್ನು ಬೆಂಗಳೂರಿನ ರಸ್ತೆಯೊಂದರಲ್ಲಿ ನಾನು ನೋಡಿದ್ದೇನೆ. ಮಲೆನಾಡಿನ ಕಾಡುಗಳಲ್ಲಿ ಈಗ ಅಂಕುಡೊಂಕಾಗಿ ಬೆಳೆದು ನಾಟಾಕ್ಕೆ ಉಪಯುಕ್ತವಲ್ಲದ ಮಧ್ಯಮ ಗಾತ್ರದ ಬೆರಳೆಣಿಕೆಯಷ್ಟು ಮರಗಳು ಉಳಿದಿವೆ ಅಷ್ಟೇ.

ನಮ್ಮ ಚಿಕ್ಕ ಮಾವನವರನ್ನು ದುಂಬಾಲು ಬಿದ್ದು ತಂದು ಹಾಕಿದ ಬೀಜಗಳಿಂದ ಎರಡು ಬೀಟೆ ಸಸಿಗಳನ್ನು ಎಬ್ಬಿಸಿ ನಮ್ಮ ತೋಟದಲ್ಲಿ ನಾಲ್ಕು ವರ್ಷಗಳ ಹಿಂದೆ ಹಾಕಿದ್ದೆವು. ಈಗ ಮರವಾಗುತ್ತಾ ಇವೆ. ನಮ್ಮ ಬೀಟೆ ಅತ್ಯಂತ ಬೆಲೆಬಾಳುವ ಮರ. ಮಳೆಕಾಡಿನ ಮರವಾದರೂ ಬೆಂಗಳೂರಿನ ರಸ್ತೆ ಬದಿಯಲ್ಲೂ ಚೆನ್ನಾಗಿ ಬೆಳೆಯುತ್ತದೆ. ಸಾಧ್ಯತೆ ಇದ್ದವರು ಸಸಿ ಮಾಡಿ ಅಥವಾ ಅರಣ್ಯ ಇಲಾಖೆಯಿಂದ ತಂದು ಬೆಳೆಸುವುದು ಒಳ್ಳೆಯದು. ಮುಂದೆ ನಮ್ಮ ಮಕ್ಕಳ ಕಾಲಕ್ಕೆ – ಕುರ್ಚಿ, ಮೇಜು, ಮಂಚ ಮಾಡಿ ನಿರ್ನಾಮವಾದ ಮರ 'ಬೀಟೆ' ಎಂದು ಗೂಗಲ್‌ನಲ್ಲಿ ತೋರಿಸಿ ಹೇಳುವುದು ಅವಮಾನಕರ ಅಲ್ಲವೇ?

ಪ್ರತಿಕ್ರಿಯಿಸಿ: **feedback@sudha.co.in**

